# ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಫೋನ ನಂಬರ:-221830/256950
ಫ್ಯಾಕ್ಸ್ ನಂಬರ:-256403
ಇ-ಮೇಲ:- seeonmcrl@gmail.com

ಅಧೀಕ್ಷಕ ಅಭಿಯಂತರರು (ವಿ), ರವರ ಕಛೇರಿ,
ಕಾರ್ಯ ಮತ್ತು ಪಾಲನೆ ವೃತ್ತ,
ಗು.ವಿ.ಸ.ಕಂ.ನಿ, ಕಲಬುರಗಿ.

ಅ.ಅ.(ಕಾ ಮತ್ತು ಪಾ ವೃತ್ತ)/ಗು/ಕಾನಿಅ(ಕ)/ಸ.ಕಾ.ನಿ.ಅ.-2/2019-20/ 1993-94 ದಿನಾಂಕ: 2 JUL 2019
ಲಗತ್ತು : (4)

ಗೆ,
ಕಾರ್ಯನಿರ್ವಾಹಕ ಅಭಿಯಂತರರು (ವಿ),
ನಿಯಂತ್ರಣ ವ್ಯವಹಾರ ಶಾಖೆ
ನಿಗಮ ಕಛೇರಿ ಜೆಸ್ಕಾಂ, ಕಲಬುರಗಿ.

ಮಾನ್ಯರೇ,

**ವಿಷಯ:-** ಕರ್ನಾಟಕ ವಿದ್ಯುತಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ ಮೇರೆಗೆ ಜೆಸ್ಕಾಂ ವೆಬ್‌ಸೈಟ್‌ನಲ್ಲಿ ಜನ ಸಂಪರ್ಕ ಸಭೆಯ ನಡವಳಿಗಳನ್ನು ಅಪಲೋಡ್ ಮಾಡುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯ ಮತ್ತು ಪಾಲನೆ ವೃತ್ತ ಕಛೇರಿ ಕಲಬುರಗಿ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ತೋರಿಸಿದ ಉಪ ವಿಭಾಗಗಳಲ್ಲಿ ಗ್ರಾಹಕ ಸಂವಾದ ಸಭೆಗಳನ್ನು ಜರುಗಿಸಲಾಗಿರುತ್ತದೆ.

1) ಶಹಾಬಾದ ಉಪ ವಿಭಾಗ ದಿನಾಂಕ:03.06.19, ಸಮಯ: ಬೆಳಿಗ್ಗೆ: 10.00 ರಿಂದ 12.00.
2) ಚಿತ್ತಾಪೂರ ಉಪ ವಿಭಾಗ ದಿನಾಂಕ:03.06.19, ಸಮಯ: ಮಧ್ಯಾಹ್ನ: 03.00 ರಿಂದ 05.30.
3) ಸೇಡಂ ಉಪ ವಿಭಾಗ ದಿನಾಂಕ:07.06.19, ಸಮಯ: ಬೆಳಿಗ್ಗೆ: 10.30 ರಿಂದ 12.30.
4) ಚಿಂಚೋಳಿ ಉಪ ವಿಭಾಗ ದಿನಾಂಕ:12.06.19, ಸಮಯ: ಬೆಳಿಗ್ಗೆ: 10.30 ರಿಂದ 12.30.

ಸಭೆಯ ನಡವಳಿಗಳ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ಕರ್ನಾಟಕ ವಿದ್ಯುತಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ ಮೇರೆಗೆ ಜೆಸ್ಕಾಂ ವೆಬ್‌ಸೈಟ್‌ನಲ್ಲಿ ಜನ ಸಂಪರ್ಕ ಸಭೆಯ ನಡವಳಿಗಳನ್ನು ಅಪಲೋಡ್ ಮಾಡಲು ಈ ಮೂಲಕ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಅಧೀಕ್ಷಕ ಅಭಿಯಂತರರು (ವಿ),
ಕಾರ್ಯ ಮತ್ತು ಪಾಲನೆ, ವೃತ್ತ
ಗು.ವಿ.ಸ.ಕಂ.ನಿ ಕಲಬುರಗಿ.

**ಪ್ರತಿಗಳು:** ಕಾರ್ಯನಿರ್ವಾಹಕ ಅಭಿಯಂತರರು (ವಿ) ಕಾ ಮತ್ತು ಪಾ ವಿಭಾಗ-2 ಕಲಬುರಗಿ/ಸೇಡಂ ರವರ ಮಾಹಿತಿಗಾಗಿ.

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಫೋನ ನಂಬರ:-221830/256950
ಫ್ಯಾಕ್ಸ್ ನಂಬರ:-256403
ಇ-ಮೇಲ:-seeonmcrl@gmail.com

ಅಧೀಕ್ಷಕ ಅಭಿಯಂತರರು(ವಿ),ರವರ ಕಛೇರಿ,
ಕಾರ್ಯ ಮತ್ತು ಪಾಲನೆ ವೃತ್ತ,
ಗು.ವಿ.ಸ.ಕಂ.ನಿ, ಕಲಬುರಗಿ.

ಅ.ಅ.(ಕಾ ಮತ್ತು ಪಾ ವೃತ್ತ)/ಗು/ಶಾನಿಅ(ಕ)/ಸ.ಕಾ.ನಿ.ಅ-2/2019-20//1995-98 ದಿನಾಂಕ:- 2 JUL 2019

## ಗ್ರಾಹಕರ ಕುಂದು ಕೋರತೆ ಅಹವಾಲು ಸ್ವಿಕಾರ ಮತ್ತು ನಿವಾರಣೆ ಸಭೆಯ ನಡವಳಿಕೆ

ದಿನಾಂಕ 03.06.2019 ರಂದು ಮುಂಜಾನೆ 10:00 ಗಂಟೆಗೆ ಶಹಾಬಾದ ಉಪ-ವಿಭಾಗ ಜೆಸ್ಕಾಂ ಕಛೇರಿಯಲ್ಲಿ ಅಧೀಕ್ಷಕ ಅಭಿಯಂತರರು (ವಿ) ರವರ ಘನ ಅಧ್ಯಕ್ಷತೆಯಲ್ಲಿ ಶಹಾಬಾದ ಉಪ-ವಿಭಾಗದ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳ ಸಂವಾದ ಸಭೆಯನ್ನು ನಡೆಸಲಾಯಿತು.

ಸಭೆಯಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ವಿ) ಶ್ರೀ ಭರತ ಚವ್ಹಾಣ, ಶಾಖಾಧಿಕಾರಿಗಳು ಮತ್ತು ಸಿಬ್ಬಂಧಿಗಳು ಉಪಸ್ಥಿತರಿದ್ದರು.

ಸದರಿ ಸಭೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಶಹಾಬಾದ, ಪಟ್ಟಣ್ಣ ನಗರ ಸಭೆ ಸದಸ್ಯರು, ಗಣಿಮಾಲಕರು, ಸುತ್ತಮುತ್ತಲ ಗ್ರಾಮದ ರೈತರು ಮತ್ತು ಸಾರ್ವಜನಿಕರ ಕುಂದು ಕೊರತೆಗಳ ಸಂವಾದ ಸಭೆಯನ್ನು ಜರುಗಿಸಲಾಯಿತು.

### ಈ ಕೇಳಗಿನ ಸಾರ್ವಜನಿಕರ ಪ್ರಶ್ನೆಗಳಿಗೆ ಸ್ಪಂದಿಸಲಾಯಿತು.

ಪ್ರ : ಶ್ರೀ ಸುಭಾಷ ಗೋಪಿಕಿಶನ ವ್ಯಾಶ್ ಸಾ॥ ಕಡಿಹಳ್ಳಿ ರವರು ಅನಧಿಕೃತವಾದ ಎಂಟು ಕೃಷಿ ಪಂಪಸೆಟ್‌ಗಳಿಗೆ ಒಂದೇ 100 ಕೆವಿ ಪರಿವರ್ತಕ ಇರುವುದರಿಂದ ಆ ಪರಿವರ್ತಕವನ್ನು ಪದೆ ಪದೆ ಸುಟ್ಟುರಿತ್ತದೆ ಆದಕಾರಣ ಮತ್ತೊಂದು ಪರಿವರ್ತಕವನ್ನು ಅಳವಡಿಸಬೆಕೆಂದು ಅಹ್ವಾನ ಸಲ್ಲಿಸಿದರು.

ಉ : ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು 30 ದಿನಗಳೊಳಗೆ ಮತ್ತೊಂದು Additional 100 KVA DTC ಅಂದಾಜು ಪಟ್ಟಿಯನ್ನು ವಿಭಾಗಿಯ ಕಛೆರಿಗೆ ಸಲ್ಲಿಸಿರುವುದಾಗಿ ತಿಳಿಸಿದರು.

ಪ್ರ : ಶ್ರೀ ಸುಭಾಷ ಗೋಪಿಕಿಶನ ವ್ಯಾಶ್ ಸಾ॥ ಕಡಿಹಳ್ಳಿ ರವರು ಕಡಿಹಳ್ಳಿಯಲ್ಲಿ ಒಬ್ಬ ಮಾರ್ಗದಾಳು ನಿಯೋಜಿಸಲು ಕೇಳಿರುತ್ತಾರೆ ಮತ್ತು ಪರಿವರ್ತಕಗಳಿಗೆ ಫೆನ್‌ಸಿಂಗ್ ಅಳವಡಿಸಲು ಕೇಳಿರುತ್ತಾರೆ.

ಉ : ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರು ಸಿಬ್ಬಂದಿಯ ಕೊರತೆ ಇರುವ ವಿಷಯ ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದು ಮತ್ತು ಫೆನ್‌ಸಿಂಗ್‌ಗಳ ಅಂದಾಜು ಪಟ್ಟಿಗಳನ್ನು ತಯ್ಯಾರಿಸಿ ವಿಭಾಗಿಯ ಕಛೇರಿಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಪ್ರ : ಶ್ರೀ ಹಣಮಂತ ಚೌವ್ಹಾಣ ಸಾ॥ ಕಡಬೂರ ರವರು 2 ವರ್ಷಗಳಿಂದ 25 ಕೆವಿಎ ಯ ಹಳ್ಳಿಯ ಪರಿವರ್ತಕವನ್ನು ಸುಟ್ಟಿರುತ್ತದೆ ಕಂಬಗಳು ಬಾಗಿರುತ್ತವೆ.

ಉ : ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರು ಡಿ.ಡಬ್ಲೂಯು ಕಾಮಗಾರಿ ವಿಭಾಗಕ್ಕೆ ಕರೆಮಾಡಿ ಈ ತಿಂಗಳಿನ ಅಂತ್ಯದ ವರೆಗೆ ಕಾರ್ಯ ಮುಗಿಸಿಕೊಡುವುದಾಗಿ ತಿಳಿಸಿದರು.

ಪ್ರ : ಶ್ರೀ ಅರ್ಶದ ಮಾರ್ಚೆಂಟ್ ಸಾ॥ ಹೋನಗುಂಟಾ ರವರ ಹೋಲದಲ್ಲಿ ಕಂಬಗಳು ಬಾಗಿರುತ್ತದೆಂದು ಅಹ್ವಾನ ಸಲ್ಲಿಸಿದರು.

ಉ : ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರು ಡಿ.ಡಬ್ಲೂಯು ಕಾಮಗಾರಿ ವಿಭಾಗಕ್ಕೆ ಕರೆಮಾಡಿ ಈ ತಿಂಗಳಿನ ಅಂತ್ಯದ ವರೆಗೆ ಕಾರ್ಯ ಮುಗಿಸುವುದಾಗಿ ತಿಳಿಸಿದರು.

ಪ್ರ : ಮರತೂರ ಗ್ರಾಮಸ್ಥರು ಎಫ್-10 ನಂದುರ ಫೀಡರ್ ಮೇಲೆ ಐ.ಪಿ ಸೆಟ್ ಮರತೂರ ವ್ಯಾಪ್ತಿಗೆ ಬರುವ ವಿದ್ಯುತ್ ಸಂಪರ್ಕ ಸರಿಯಾಗಿ ಒದಗಿಸದೆ ಇರುವ ದೂರ ಸಲ್ಲಿಸಿದರು.

ಉ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರು ಶಾಖಾಧಿಕಾರಿ ಭಂಕೂರ ರವರಿಗೆ ಸ್ಥಳ ಪರಿಶೀಲನಾ ವರದಿಯನ್ನು ಸಲ್ಲಿಸಲು ಸೂಚಿಸಿದರು.

ಪ್ರ : ಶ್ರೀ ಅರ್ಶದ ಮಾರ್ಚೆಂಟ್ ಸಾ॥ ಹೋನಗುಂಟಾ ರವರ ಎಫ್-5 ಗಣೇಶ ಫಿಡರ್‌ನ್ನು Bifurcation ಮಾಡಲು ಅಹ್ವಾನ ಸಲ್ಲಿಸಿದರು.

ಉ : ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರು ಶಾಖಾಧಿಕಾರಿ ಶಾಹಾಬಾದ ಗ್ರಾಮೀಣ ರವರಿಗೆ ಸ್ಥಳ ಪರಿಶೀಲನಾ ವರದಿಯನ್ನು ಸಲ್ಲಿಸಲು ಸೂಚಿಸಿದರು.

ಪ್ರ : ಶ್ರೀ ಮೀರ ಅಲ್ಲಿ ಸಾ॥ ತೋನಸಿನ್ನಹಳ್ಳಿ ರವರು ತೋನಸಿನ್ನಹಳ್ಳಿ, ತೆಗನೂರು ಮತ್ತು ತರನ್ನಹಳ್ಳಿ ಈ ಗ್ರಾಮಗಳಲ್ಲಿ ಕಂಬಗಳು ಬಾಗಿ ಬಿದ್ದಿರುತ್ತದೆ, ದೂರು ನಿಡಿದರು.

ಉ : ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರು ಶಾಖಾಧಿಕಾರಿ ಭಂಕೂರ ರವರಿಗೆ ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿಯನ್ನು ವಿಭಾಗಿಯ ಕಛೇರಿಗೆ ಸಲ್ಲಿಸಲು ಸೂಚಿಸಲಾಯಿತು.

ಶಹಾಬಾದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಶ್ರೀ ಭರತ ಚೌವ್ಹಾಣ ರವರು **ರಾಜ್ಯ ಸರಕಾರದ ವಿದ್ಯುತ್ ಯೊಜನೆಗಳನ್ನು ಮತ್ತು ವಿದ್ಯುತ್ ಸುರಕ್ಷಿತ ಬಗ್ಗೆ ಗ್ರಾಹಕರಿಗೆ ತಿಳಿಸಿದರು.**

## ಸುರಕ್ಷತೆಯ ಕ್ರಮಗಳ ಬಗ್ಗೆ ಮನವರಿಕೆ

1. ಯಾವಗಲೂ ಅಂಕೀಕೃತ ಪಡೆದ ವಿದ್ಯತ್ ಗುತ್ತಿಗೆದಾರರಿಂದ ಮಾತ್ರ ವೈರಿಂಗ್ ಕೆಲಸವನ್ನು ನಿರ್ವಹಿಸಿಕೊಳ್ಳಿ.
2. ಪ್ಲಗ್ ಸಾಕಟ ಮಕ್ಕಳ ಕೈಗೆ ಸಿಗದಂತೆ ವ್ಯವಸ್ತೆಗೋಳಿಸಿರಿ.
3. 3 ಪೀನ ಸಾಕಟ ಮಾತ್ರ ಉಪಯೋಗಿಸಿ.
4. ಇಂಧನ ಉಳಿಸಿ ಸಂರಕ್ಷಿಸಿ.
5. ಸೂಕ್ತ ಅರ್ಥಿಂಗ್ ಮತ್ತು ಇನ್ಸುಲೇಶನ್‌ಗಾಗಿ ಸ್ಥಾಪನದ ಪರೀಕ್ಷೆ ಮಾಡಿಸಿರಿ.
6. ವಿದ್ಯುತ್ ದೀಪಗಳನ್ನು/ಫ್ಯಾನ್/ಬೀದಿದೀಪಗಳನ್ನು/ಹವಾನಿಯಂತ್ರಕಗಳ ಅಗತ್ಯವಿಲ್ಲದಿದ್ದಾಗ ಆರಿಸುವ ರೂಡಿಯು ಇರುವುದಿಲ್ಲ ಇದರಿಂದ ಬಹಳಷ್ಟು ವಿದ್ಯುತ ಪೋಲಾಗುತ್ತಿದ್ದು, ಸ್ವಲ್ಪ ಸಮಯ ಪ್ರಜ್ಞೆಯಿಂದ ಪೋಲಾಗುವ ವಿದ್ಯುತನ್ನು ಉಳಿಸುವುದು, ಈ ರೂಡಿಯನ್ನು ಮನೆಗಳ ಅಳವಡಿಸಿದಲ್ಲಿ ವಿದ್ಯುತ್ ಹಾಗೂ ಹಣ ಎರಡನ್ನು ಉಳಿಸಿದಂತಾಗುತ್ತದೆ.

ಈ ಮೇಲ್ಕಾಣಿಸಿದ ವಿಷಯಗಳನ್ನು ಮುಕ್ತವಾಗಿ ಚರ್ಚಿಸಿ ಸರಿಪಡಿಸಲು ಕ್ರಮ ಕೈಗೊಳ್ಳುವುದೆಂದು ಸಾರ್ವಜನಿಕರಿಗೆ ಧನ್ಯವಾದಗಳನ್ನು ಹೇಳಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಅಧೀಕ್ಷಕ ಅಭಿಯಂತರರು (ವಿ),
ಕಾರ್ಯ ಮತ್ತು ಪಾಲನೆ ವೃತ್ತ
ಗು.ವಿ.ಸ.ಕಂ.ನಿ. ಕಲಬುರಗಿ

**ಪ್ರತಿಗಳು ದಯಾಪರ ಮಾಹಿತಿಗಾಗಿ :**

1) ಮುಖ್ಯ ಅಭಿಯಂತರರು (ವಿದ್ಯುತ್) ಕಾರ್ಯ ಮತ್ತು ಪಾಲನೆ ವಲಯ ಜೆಸ್ಕಾಂ ಕಲಬುರಗಿ.
2) ಕಾರ್ಯನಿರ್ವಾಹಕ ಅಭಿಯಂತರು (ವಿ) ಕಾರ್ಯ ಮತ್ತು ಪಾಲನೆ ವಿಭಾಗ-2 ಜೆಸ್ಕಾಂ ಕಲಬುರಗಿ

# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ಫೋನ ನಂಬರ:-221830/256950
ಫ್ಯಾಕ್ಸ್ ನಂಬರ:-256403
ಇ-ಮೇಲ:-seeonmcrl@gmail.com

ಅಧೀಕ್ಷಕಅಭಿಯಂತರರು (ವಿ),ರವರಕಛೇರಿ,
ಕಾರ್ಯ ಮತ್ತು ಪಾಲನೆ ವೃತ್ತ ,
ಗು.ವಿ.ಸ.ಕಂ.ನಿ, ಕಲಬುರಗಿ.

ಅ.ಅ.(ಕಾ ಮತ್ತು ಪಾ ವೃತ್ತ)/ಕ/ಕಾನಿಅ(ಕ)/ಸಕಾನಿಅ-2/19-20/ 1997-98 ದಿನಾಂಕ: 2 JUL 2019
ಲಗತ್ತು :

## ಗ್ರಾಹಕರ ಕುಂದು ಕೊರತೆಗಳ ಜನ ಸಂಪರ್ಕ ಸಭೆಯ ನಡುವಳಿಗಳು

ದಿನಾಂಕ: 03.06.2019 ರಂದು ಚಿತ್ತಾಪೂರ ಉಪ-ವಿಭಾಗದಲ್ಲಿ ಗ್ರಾಹಕರ ಕುಂದು ಕೊರತೆಗಳ ಜನ ಸಂಪರ್ಕ ಸಭೆಯನ್ನು ಮಾನ್ಯ ಅಧೀಕ್ಷಕ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನೆ ವೃತ್ತ, ಗು.ವಿ.ಸ.ಕಂ.ನಿ. ಕಲಬುರಗಿ ರವರ ಉಪಸ್ಥಿತಿಯಲ್ಲಿ ನಡೆಸಲಾಯಿತು. ಈ ಸಭೆಗೆ ಹಾಜರಾಗಿರುವ ಅಧಿಕಾರಿಗಳು.

1. ಶ್ರೀ ಭರತ ಚವ್ಹಾಣ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಉಪ-ವಿಭಾಗ, ಚಿತ್ತಾಪೂರವರ,
2. ಕು. ಶಿಲ್ಪಾ ಹಿರಿಯ ಸಹಾಯಕರು ಚಿತ್ತಾಪೂರ
3. ಶ್ರೀ ವಿನೋದ ಶಾಖಾಧಿಕಾರಿಗಳು, ರಾವೂರ
4. ಶ್ರೀ ಜಗಧೀಶ ಶಾಖಾಧಿಕಾರಿಗಳು, ಅಳ್ಳೋಳಿ
5. ಶ್ರೀ ಪ್ರಾಣೇಶ ಶಾಖಾಧಿಕಾರಿ ಚಿತ್ತಾಪೂರ
6. ಶ್ರೀ ಅಮರೇಶ ಹೂಗಾರ ಕಿ.ಅಭಿಯಂತರರು(ವಿ) ತಾಂತ್ರಿಕ ಚಿತ್ತಾಪೂರ

ಈ ಸಭೆಯಲ್ಲಿ ಮಾನ್ಯ ಅಧೀಕ್ಷಕ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನೆ ವೃತ್ತ, ಗು.ವಿ.ಸ.ಕಂ.ನಿ., ಕಲಬುರಗಿ ರವರು ಎಲ್ಲಾ ಗ್ರಾಹಕರಿಗೆ ಸ್ವಾಗತವನ್ನು ಕೋರುತ್ತಾ ತಮ್ಮ ವಿಷಯಗಳನ್ನು ಮಂಡಿಸಲು ಕೋರಿದರು.

1. ಚಿತ್ತಾಪೂರ ಪಟ್ಟಣದಲ್ಲಿ ಬಹಳಷ್ಟು ಓಣಿಯಲ್ಲಿ ಕಬ್ಬಿಣದ ಕಂಬಗಳು ಇದ್ದು, ಇದನ್ನು ಬದಲಾಯಿಸಲು ಗ್ರಾಹಕರಾದ ಶ್ರೀ ಅಂಬಣ್ಣಾ ತಂದೆ ಸಾಬಣ್ಣಾರವರು ತಿಳಿಸಿದರು.

   ಸದರಿ ವಿಷಯದ ಬಗ್ಗೆ ಅಧೀಕ್ಷಕ ಅಭಿಯಂತರರು (ವಿ), ರವರು ಅದರ ಪ್ರಕಾರ ಶಾಖಾಧಿಕಾರಿಯವರಿಗೆ ಅಂದಾಜು ಪಟ್ಟಿ ತಯ್ಯಾರಿಸಿ ಕಂಬಗಳನ್ನು ಹಾಕಿ ಕೆಲಸ ಮುಗಿಸಿಕೊಡಲು ಆದೇಶಿಸಿದರು.

2. ಯರಗಲ್ ಗ್ರಾಮದಲ್ಲಿನ ಐ.ಪಿ ಸೇಟ್ ಮಾರ್ಗದ ಕಂಬಗಳು ಬಾಗಿದ್ದು, ತಂತಿ ಜೋತು ಬಿದ್ದಿರುತ್ತವೆ, ಕಂಬಗಳು ಬಹಳ ದೂರದಲ್ಲಿದ್ದು ಇದರಿಂದ ವಿದ್ಯುತ್ ಸರಬರಾಜಿನಲ್ಲಿ ಅಡಚಣೆಯಾಗುತ್ತಿದ್ದು, ತಾವು ದಯಮಾಡಿ ಕಂಬಗಳನ್ನು ಸೀದಾ ಮಾಡಬೇಕಾಗಿ ಗ್ರಾಹಕರಾದ ಶ್ರೀ ಐಲರೆಡ್ಡಿ ತಂದೆ ಸಂಗಣಗೌಡ ಮು: ಯರಗಲ್ರವರು ತಿಳಿಸಿದರು,

   ಸದರಿ ವಿಷಯದ ಬಗ್ಗೆ ಅಧೀಕ್ಷಕ ಅಭಿಯಂತರರು (ವಿ), ರವರು ಶಾಖಾಧಿಕಾರಿಯವರಿಗೆ ಈ ಮಾರ್ಗದ ವಿದ್ಯುತ್ ತಂತಿಗಳನ್ನು ಸರಿಪಡಿಸಿ, ಕಂಬಗಳನ್ನು ಮಾಡಿಕೊಡಲು ಹಾಗೂ Intermediate Pole ಹಾಕಲು ಸೂಚಿಸಿದರು.

3. ವಾರ್ಡ ನಂ 20,21,22 ರ ಕಬ್ಬಿಣ ಕಂಬಗಳು ಇದ್ದು ಇದರಿಂದಾಗಿ ವಿದ್ಯುತ್ ಅಪಘಾತವಾಗಬಹುದು ಎಂದು ಗ್ರಾಹಕರಾದ ಹಾಗೂ ಚಿತ್ತಾಪೂರ ಪಟ್ಟಣ ಪುರಸಭೆ ಮಾಜಿ ಉಪಾಧ್ಯಕ್ಷರಾದ ಶ್ರೀ ರಸೂಲಸಾಬ ಮು: ಚಿತ್ತಾಪೂರವರು ತಿಳಿಸಿದರು.

   ಸದರಿ ವಿಷಯದ ಬಗ್ಗೆ ಅಧೀಕ್ಷಕ ಅಭಿಯಂತರರು (ವಿ), ರವರು ಶಾಖಾಧಿಕಾರಿಯವರಿಗೆ ಕಬ್ಬಣದ ಕಂಬಗಳು ಬದಲಾಯಿಸಲು ಮತ್ತು ಅಂದಾಜು ಪಟ್ಟಿ ತಯ್ಯಾರಿಸಿ ಸಲ್ಲಿಸಲು ಸೂಚಿಸಿದರು.

ತಮ್ಮ ವಿಶ್ವಾಸಿ
ಅಧೀಕ್ಷಕ ಅಭಿಯಂತರರು (ವಿ),
ಕಾರ್ಯ ಮತ್ತು ಪಾಲನೆ ವೃತ್ತ
ಜೆಸ್ಕಾಂ ಕಲಬುರಗಿ.

ಪ್ರತಿಗಳು ತಮ್ಮ ದಯಾಪರ ಮಾಹಿತಿಗಾಗಿ:

1. ಮುಖ್ಯ ಇಂಜಿನಿಯರ್ (ವಿದ್ಯುಚ್ಛಕ್ತಿ) , ಕಾ ಮತ್ತು ಪಾ ವಲಯ, ಜೆಸ್ಕಾಂ, ಕಲಬುರಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾ & ಪಾ ವಿಭಾಗ-2, ಗು.ವಿ.ಸ.ಕಂ.ನಿ, ಕಲಬುರಗಿ

# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ಫೋನ ನಂಬರ:-221830/256950
ಫ್ಯಾಕ್ಸ್ ನಂಬರ:-256403
ಇ-ಮೇಲ:-seeonmcrl@gmail.com

ಅಧೀಕ್ಷಕಅಭಿಯಂತರರು (ವಿ),ರವರಕಛೇರಿ,
ಕಾರ್ಯ ಮತ್ತು ಪಾಲನೆ ವೃತ್ತ ,
ಗು.ವಿ.ಸ.ಕಂ.ನಿ, ಕಲಬುರಗಿ.

ಅ.ಅ.(ಕಾ ಮತ್ತು ಪಾ ವೃತ್ತ)/ಕ/ಕಾನಿಅ(ಕ)/ಸಕಾನಿಅ-2/19-20/1999-2000 ದಿನಾಂಕ: 2 JUL 2019
ಲಗತ್ತು :

## ಗ್ರಾಹಕರ ಕುಂದು ಕೊರತೆಗಳ ಜನ ಸಂಪರ್ಕ ಸಭೆಯ ನಡುವಳಿಗಳು

ದಿನಾಂಕ: **07.06.2019** ರಂದು ಸೇಡಂ ಉಪ-ವಿಭಾಗದಲ್ಲಿ ಗ್ರಾಹಕರ ಕುಂದು ಕೊರತೆಗಳ ಜನ ಸಂಪರ್ಕ ಸಭೆಯನ್ನು ಮಾನ್ಯ ಅಧೀಕ್ಷಕ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನೆ ವೃತ್ತ, ಗು.ವಿ.ಸ.ಕಂ.ನಿ. ಕಲಬುರಗಿ ರವರ ಉಪಸ್ಥಿತಿಯಲ್ಲಿ ನಡೆಸಲಾಯಿತು. ಈ ಸಭೆಗೆ ಹಾಜರಾಗಿರುವ ಅಧಿಕಾರಿಗಳು.

| | |
|---|---|
| 1) ಶ್ರೀ ಮೋಹನ ಕುಮಾರ | ಮಾನ್ಯ ಅಧೀಕ್ಷಕ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನೆ ವೃತ್ತ, ಗು.ವಿ.ಸ.ಕಂ.ನಿ.,ಕಲಬುರಗಿ. |
| 2) ಶ್ರೀ. ರಾಜು ಕುಲಕರ್ಣಿ | ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವಿಭಾಗ ಗು.ವಿ.ಸ.ಕಂ.ನಿ., ಸೇಡಂ. |
| 3) ಶ್ರೀ. ಎಸ್.ಎಮ್.ರಾಠೋಡ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾಮಗಾರಿ ಘಟಕ, ಕಾರ್ಯ ಮತ್ತು ಪಾಲನೆ ವಿಭಾಗ ಗು.ವಿ.ಸ.ಕಂ.ನಿ.,ಸೇಡಂ |
| 4) ಶ್ರೀ. ಉಮೇಶ ಜಿ ಗೋಳಾ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ಉಪ-ವಿಭಾಗ ಗು.ವಿ.ಸ.ಕಂ.ನಿ.,ಸೇಡಂ. |
| 5) ಶ್ರೀ. ಮೊಹಮ್ಮದ ಅಲಿ | ಸಹಾಯಕ ಅಭಿಯಂತರರು(ವಿ), ಉಪ-ವಿಭಾಗ ಸೇಡಂ. |
| 6) ಶ್ರೀ. ಮೋಹನ ಎಸ್. ರಾಠೋಡ | ಶಾಖಾಧಿಕಾರಿ ಮುಧೋಳ ಶಾಖೆ. |
| 7) ಶ್ರೀ. ಕಾಮಣ್ಣ | ಶಾಖಾಧಿಕಾರಿ ಸೇಡಂ ಪಟ್ಟಣ ಶಾಖೆ. |
| 8) ಶ್ರೀ. ಶೇಖ ಮಹೆಬೂಬ ಅಲಿ | ಪ್ರಭಾರಿ ಶಾಖಾಧಿಕಾರಿ ಮಳಖೇಡ ಶಾಖೆ. |
| 9) ಶ್ರೀ. ತಿಪ್ಪಣ್ಣ | ಪ್ರಭಾರಿ ಶಾಖಾಧಿಕಾರಿ ಕೋಡ್ಲಾ ಶಾಖೆ. |
| 10) ಶ್ರೀ. ವಿಜಯಕುಮಾರ | ಪ್ರಭಾರಿ ಶಾಖಾಧಿಕಾರಿ ಕುರಕುಂಟಾ ಶಾಖೆ. |

ಈ ಸಭೆಯಲ್ಲಿ ಮಾನ್ಯ ಅಧೀಕ್ಷಕ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನೆ ವೃತ್ತ, ಗು.ವಿ.ಸ.ಕಂ.ನಿ., ಕಲಬುರಗಿ ರವರು ಎಲ್ಲಾ ಗ್ರಾಹಕರಿಗೆ ಸ್ವಾಗತವನ್ನು ಕೋರುತ್ತಾ ತಮ್ಮ ವಿಷಯಗಳನ್ನು ಮಂಡಿಸಲು ಕೋರಿದರು.

1) ಕೀಶನ ಸಿಂಗ್ ತಾಂಡಾದ ನಿವಾಸಿರವರು ಸುಮಾರು ನಾಲ್ಕು ದಿನದಿಂದ ಕೀಶನ ಸಿಂಗ್ ತಾಂಡಾದಲ್ಲಿ ವಿದ್ಯುತ್ ಅಡಚಣೆ ಉಂಟಾಗಿರುತ್ತದೆ. ರಾತ್ರಿ ಸಮಯದಲ್ಲಿ ವಿದ್ಯುತ್ ಇರುವುದಿಲ್ಲ. ಇದರಿಂದ ಮಕ್ಕಳಿಗೆ ಹಾಗೂ ಹಿರಿಯ ನಾಗರಿಕರಿಗೆ ಬಹಳ ತೊಂದರೆಯುಂಟಾಗಿರುತ್ತದೆ ಹೇಳಿದರು.

ಅಧೀಕ್ಷಕ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನೆ ವೃತ್ತ, ಗು.ವಿ.ಸ.ಕಂ.ನಿ., ಕಲಬುರಗಿ ರವರು ಸೇಡಂ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರವರೊಂದಿಗೆ ಚರ್ಚಿಸಿ ಕೀಶನ ಸಿಂಗ್ ತಾಂಡಾ 11 ಕೆ.ವಿ ಮಾರ್ಗದ ಫೀಡರ್ ಚಿತ್ತಾಪೂರ ಉಪ-ಕೇಂದ್ರದಿಂದ ಬರುತ್ತದೆ. ಸದರಿ ಫೀಡರ್ ಅತೀ ದೀರ್ಘವಾಗಿ ಇರುವುದರಿಂದ ಲೈನ್ ಫಾಲ್ಟ್ ಅಟೆಂಡ್ ಮಾಡಲು ವಿಳಂಬವಾಗುವುದರಿಂದ ಚಿತ್ತಾಪೂರ ಉಪ-ವಿಭಾಗದ ಸಿಬ್ಬಂದಿಗಳುಕಿಶನ್ ಸಿಂಗ್ ತಾಂಡಾದ 11 ಕೆ.ವಿ ಮಾರ್ಗದ ಜಂಪ್ ತೆಗೆದು ಹಾಕುತ್ತಾರೆ.ಆದ್ದರಿಂದ ಸದರಿ ಫೀಡರ್‌ನ ಎನ್.ಜೆ.ವಾಯ್ ಫೀಡರ್ ಮೇಲೆ ಸಂಪರ್ಕ ಕಲ್ಪಿಸಿ ನಿರಂತರ ವಿದ್ಯುತ್ ಪೂರೈಕೆ ಮಾಡಲು ಸೂಚಿಸಿದ್ದಾರೆ.

2) ಶ್ರೀ. ಬಾಬುರಾವ ರಾಠೋಡ ರವರು ಕಡತಾಲ ತಾಂಡದಲ್ಲಿ ಟ್ರಾನ್ಸಫಾರ್ಮರ್ ಮೇಲೆ ಅಧಿಕ ಹೊಣೆ ಇರುತ್ತದೆ. ಸದರಿ ಟ್ರಾನ್ಸಫಾರ್ಮರ್ ಮೇಲೆ ವಿದ್ಯುತ್ ಅಡಚಣೆ ತುಂಬ ಆಗಿರುತ್ತದೆ. ಅದರಿಂದ ಅಡಿಷ್ನಲ್ ಟ್ರಾನ್ಸಪಾರ್ಮರ್ ಅಳವಡಿಸಬೇಕೆಂದು ಕೋರಿರುತ್ತಾರೆ.

ಸದರಿ ವಿಷಯದ ಬಗ್ಗೆ ಅಧೀಕ್ಷಕ ಅಭಿಯಂತರರು (ವಿ), ರವರು ಸಂಭಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಅವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.